ನಾನು ಮುಖ್ಯಮಂತ್ರಿಗಳು ಮತ್ತು ನೀರಾವರಿ ಸಚಿವರು ಚರ್ಚೆ ಮಾಡಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಶೀಘ್ರವಾಗಿ ಕ್ರಮ ತೆಗೆದುಕೊಳ್ಳುತ್ತೇವೆ. ಆ ಎರಡೂ ಜಿಲ್ಲಾಧಿಕಾರಿಗಳೂ ಸೇರಿ ನೀರಾವರಿ ಇಲಾಖೆಯವರೂ ಸೇರಿ ನಾಳೆಯೇ ಒಂದು ನಿರ್ದೇಶನ ಕೊಡುವುದಕ್ಕೆ ಪ್ರಯತ್ನ ಮಾಡೋಣ. ಮುಖ್ಯಮಂತ್ರಿಗಳು ಮತ್ತು ನೀರಾವರಿ ಸಚಿವರಿಗೆ ನಾಳೇಯೇ ಬೇಕಾದರೆ ಭೇಟಿ ಮಾಡೋಣ.

ವಿಷಯ : ಪರಿಶಿಷ್ಟ ಜಾತಿ ಜನಾಂಗದ ಇಂಜಿನಿಯರ್‌ಗಳು ಬೆಂಗಳೂರಿನಲ್ಲಿ ಆಮರಣ ಉಪವಾಸ ಸತ್ಯಾಗ್ರಹ ಕೈಗೊಂಡಿರುವ ಬಗ್ಗೆ.

ಶ್ರೀ ಗೋವಿಂದ ಮಕ್ಕಪ್ಪ ಕಾರ್ಜೋಳ : ಸನ್ಮಾನ್ಯ ಅಧ್ಯಕ್ಷರೆ ಕಳೆದ ಸುಮಾರು ದಿನಗಳಿಂದ ಪರಿಶಿಷ್ಟ ಜಾತಿ ಜನಾಂಗದ ಇಂಜಿನಿಯರ್ಸ್ ಬ್ಯಾಕ್‌ಲಾಗನಲ್ಲಿ ಅಪಾಯಿಂಟ್ ಆದವರಿಗೆ ಅವಧಿ ಮುಗಿದು ಅವರಿಗೆ ಟರ್ಮಿನೇಟ್ ಮಾಡಿದ್ದಾರೆಂದು ಅವರು ಆಮರಣ ಉಪವಾಸ ಮಾಡುತ್ತಿದ್ದಾರೆ. ಅದಕ್ಕೆ ಸರ್ಕಾರ ಏನು ಉತ್ತರ ಹೇಳುತ್ತದೆ ಎಂದು ಕೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು : ಮುಖ್ಯಮಂತ್ರಿಗಳು ಇಲ್ಲ ಪರಿಶೀಲನೆ ಮಾಡುತ್ತೇವೆಂದು ಹೇಳುತ್ತಾರೆ.

ಶ್ರೀ ಗೋವಿಂದ ಕಾರ್ಜೋಳ ಮಕ್ಕಪ್ಪ: ಪರಿಶೀಲನೆ ಮಾಡುವುದು ಬೇಡ 13,000 ಜನ ಪರಿಶಿಷ್ಟ ಜಾತಿ ಜನಾಂಗದ ಇಂಜಿನಿಯರ್ಸ್ ಬೆಂಗಳೂರಿನಲ್ಲಿ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಅವರ ಬಗ್ಗೆ ಸರ್ಕಾರ ಏನಾದರೂ ಕಾಳಜಿ ವಹಿಸಬೇಕು.

ಶ್ರೀ ಜಯಪ್ರಕಾಶ್ ಹಗ್ಡೆ ಕೆ. : ಪರಿಶೀಲನೆ ಮಾಡುವುದಾದರೆ ಇವತ್ತು ಅಗತ್ಯವಿಲ್ಲ

ಶ್ರೀ ಜೆ.ಸಿ. ಮಾಧುಸ್ವಾಮಿ : ಅಧ್ಯಕ್ಷರಿಗೆ ಸರ್ಕಾರದ ಉತ್ತರದ ಮೇಲೆ ನಂಬಿಕೆ ಹೋಗಿ ಬಿಟ್ಟಿದೆ ಹೇಗೆ ಎಂದು ನಮಗೆ ಸಮಸ್ಯೆಯಾಗಿದೆ.

ಶ್ರೀ ಸಿದ್ದರಾಮಯ್ಯ : ಶೂನ್ಯ ವೇಳೆಯಲ್ಲಿ ಎತ್ತಿದ ತಕ್ಷಣ ಇಲ್ಲಿಯೇ ಪ್ರಶ್ನೆಗೆ ಉತ್ತರ ಕೊಡಬೇಕೆಂದು ಹೇಳಿದರೆ ಹೇಗೆ? ಗಮನಕ್ಕೆ ತಂದು ಸರ್ಕಾರದ ಗಮನ ಸೆಳೆದಿದ್ದಾರೆ ಸರ್ಕಾರ ಪರಿಶೀಲನೆ ಮಾಡಿ ಏನು ಕ್ರಮ ತೆಗೆದುಕೊಳ್ಳಬೇಕು ಅದನ್ನು ಯೋಗ್ಯ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಸರ್ಕಾರ ಏನು ಹೇಳುತ್ತದೆ ಪರಿಶೀಲನೆ ಮಾಡುತ್ತದೆ ಎಂದು ಹೇಳುತ್ತಾರೆ.....

ಅಧ್ಯಕ್ಷರು : ಏತಕ್ಕೆ ಹೇಳಿದೆ ಎಂದರೆ, ಈ ಸಂದರ್ಭದಲ್ಲಿ ಸಂಬಂಧಪಟ್ಟ ಮಂತ್ರಿಗಳು ಇಲ್ಲ ಮುಖ್ಯಮಂತ್ರಿಗಳು ಹೇಳಬೇಕು ಅವರೂ ಇಲ್ಲ ಆದ್ದರಿಂದ ಇಲ್ಲಿರತಕ್ಕಂತಹವರು ಪರಿಶೀಲನೆ ಮಾಡುತ್ತೇವೆಂದು ಹೇಳುತ್ತಾರೆಂದು ಹೇಳಿದೆ.

ಶ್ರೀ ಸಿದ್ದರಾಮಯ್ಯ : ಶೂನ್ಯ ವೇಳೆಯಲ್ಲಿ ಹೇಳಿದ್ದರಿಂದ ಪರಿಶೀಲನೆ ಮಾಡುತ್ತಾರೆಂದು ಹೇಳಿದ್ದಾರೆ.

ವಿಷಯ : ಸದನದಲ್ಲಿ ಮಂತ್ರಿಗಳ ಮತ್ತು ಆಡಳಿತ ಪಕ್ಷದ ಸದಸ್ಯರ ಹಾಜರಾತಿ ಕೊರತೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಆಡಳಿತ ಪಕ್ಷದವರು ಮಂತ್ರಿಗಳನ್ನು ಸೇರಿಸಿಕೊಂಡು ಕೇವಲ 16 ಜನರಿದ್ದಾರೆ, ಇದರಲ್ಲಿ ಇಬ್ಬರೇ ಮಂತ್ರಿಗಳು, ಬೇಕಾದರೆ ತಾವು ಲೆಕ್ಕವನ್ನು ಹಾಕಿ

ಶ್ರೀ ಜೆ.ಸಿ. ಮಾಧುಸ್ವಾಮಿ: ಆ 16 ಜನರಲ್ಲಿ ಶ್ರೀ ವೈಜನಾಥ್ ಪಾಟೀಲರವರನ್ನು ಬಿಟ್ಟು ಬಿಡಿ.

ಶ್ರೀ ವಾಟಾಳ್ ನಾಗರಾಜ್ : ನಾನು ಸತ್ಯವನ್ನೇ ಹೇಳುತ್ತೇನೆಂದು ಹೇಳಿದಿರಲ್ಲ, ಸರ್ಕಾರಕ್ಕೆ ಏನಾಗಿದೆ.

ಶ್ರೀ ಸಿದ್ದರಾಮಯ್ಯ (ಮಾನ್ಯ ಉಪ ಮುಖ್ಯಮಂತ್ರಿಗಳು): ಆ ಮೇಲ್ಮನೆಯಲ್ಲಿ ಸಚಿವರು ಹೋಗಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಆ ಮನೆ ಅಂದರೆ ನನಗೆ ಅರ್ಥವಾಗುತ್ತಿಲ್ಲ ದಯವಿಟ್ಟು ತಾವು ನೋಡಿ.

ಶ್ರೀ ಸಿದ್ದರಾಮಯ್ಯ : ನಿಮ್ಮ ಸಮಸ್ಯೆ ಏನು ಎಂದು ಹೇಳಿದರೆ ನಾವು ಉತ್ತರವನ್ನು ಕೊಡುವುದಕ್ಕೆ ಇಲ್ಲಿದ್ದೇವೆ.